ಶ್ರೀ ಎಂ. ಮಲ್ಲಪ್ಪ.—ಸ್ಟೇಟ್ ಹೈವೇಸ್ ಬಿಟ್ಟು ಉಳಿದ ಪಿ.ಡಬ್ಲ್ಯು.ಡಿ. ರಸ್ತೆಗಳನ್ನು ಇನ್ನೂ ಹೆಚ್ಚು ಹಣ ಕೊಟ್ಟು ಉತ್ತಮ ಪಡಿಸುವುದಕ್ಕೆ ಪ್ರಯತ್ನ ಮಾಡುತ್ತಿರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಬಜೆಟ್ ಭಾಷಣದಲ್ಲಿ ಉತ್ತರ ಕೊಡುವಾಗ ಹೇಳಿದೆ. ಹಿಂದೆ ಏನು ಮೈಂಟೆನೆನ್ಸ್ ಗ್ರಾಂಟ್ ಕೊಡುತ್ತಿತ್ತು, ಈಗ ಅದಕ್ಕಿಂತ ಹೆಚ್ಚಾಗಿ ಮೈಂಟೆನೆನ್ಸ್ ಗ್ರಾಂಟ್ ಕೊಡುತ್ತೇವೆ ಇವರ ಬಗ್ಗೆ ಏನಾದರೆ ಕೊಡುವುದಾದರೆ ಸ್ಟೇಟ್ ಹೈವೇಸ್‌ಗೆ ಮೊದಲು ಎರಡು ಸಾವಿರ ರೂಪಾಯಿ ಕೊಡುತ್ತಿತ್ತು, ಈಗ ನಾಲ್ಕೂವರೆ ಸಾವಿರ ರೂಪಾಯಿ ಎಂ.ಡಿ ಆರ್‌ಗೆ ಕೊಡುತ್ತಿದ್ದೇವೆ. ಒ.ಡಿ.ಆರ್ ಗೆ 1200 ರಿಂದ 2,000 ರೂಪಾಯಿ ಮಾಡಿದ್ದೇವೆ ಮಲೆನಾಡುಪ್ರದೇಶದಲ್ಲಿ ಇರತಕ್ಕ ರಸ್ತೆಗಳಿಗೆ ಶೇಕಡ 25 ರಷ್ಟು ಹೆಚ್ಚಿಗೆ ಕೊಡುತ್ತೇವೆ

ಶ್ರೀ ಜಿ. ಪುಟ್ಟಸ್ವಾಮಿ —ತಾವು ರಾಜ್ಯ ಹೆದ್ದಾರಿಗಳಿಗೆ ಕೊಟ್ಟಿರತಕ್ಕ ಹಣ ಬಹಳ ಕಡಿಮೆ. ಇದನ್ನು ಅಭಿವೃದ್ಧಿಗೊಳಿಸುವುದಕ್ಕೆ ಹಣ ಜಾಸ್ತಿ ಮಾಡುತ್ತೀರಾ ಸ್ವಾಮಿ ?

ಶ್ರೀ ಎಚ್. ಎಂ ಚನ್ನಬಸಪ್ಪ —ಈಗತಾನೆ ಹೇಳಿದೆ. ಮಲೆನಾಡು ಪ್ರದೇಶದಲ್ಲಿ ಎರ್ಲಾ ಕಡೆ ಕೊಟ್ಟಿರುವುದಕಿಂತ 25 ಪರ್ಸಂಟ್ ಹೆಚ್ಚಿಗೆ ಕೊಡುತ್ತೇವೆ.

ಶ್ರೀ ಜಿ. ಪುಟ್ಟಸ್ವಾಮಿ.—ಪರಿಶಿಷ್ಟವನ್ನು ನೋಡಿದಾಗ ಮಾಡಿಗೆರೆ ತಾಲ್ಲೂಕಿಗೆ ಬಹಳ ಕಡಿಮೆ ಹಣ ಕೊಟ್ಟಿದ್ದೀರಿ. ಅದನ್ನು ಜಾಸ್ತಿ ಮಾಡುತ್ತೀರಾ ಸ್ವಾಮಿ ?

ಶ್ರೀ ಎಚ್. ಎಂ ಚನ್ನಬಸಪ್ಪ —ರಸ್ತೆಗಳ ಅವಶ್ಯಕತೆಗಳನ್ನು ನೋಡಿಕೊಂಡು ಮುಂಜೂರು ಮಾಡುತ್ತೇವೇಯೇ ಹೊರತು ತಾಲ್ಲೂಕುವಾರು ಹಂಚುವುದಿಲ್ಲ.

ಎಸ್. ಎಫ್. ಡಿ. ಎ. ಯೋಜನೆಯನ್ನು ಮುಂದುವರಿಸುವುದು

615. ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).—ವ್ಯವಸಾಯ ಹಾಗೂ ಪಶುಸಂಗೋಪನ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೇ:-

(ಅ) ಸಣ್ಣ ಹಿಡುವಳಿದಾರರ ಯೋಜನೆಯು 30-3-1976ಕ್ಕೆ ಮುಗಿಯುವದಿದ್ದು ಅದನ್ನು ಇನ್ನೂ 5 ವರ್ಷಗಳು ಮುಂದುವರಿಸಲು ಸರಕಾರ ಉದ್ದೇಶಿಸಿದೆಯೇ ;

(ಆ) ಈ ಯೋಜನೆಯ ಫಲ ಇನ್ನೂ ಅನೇಕ ಸಣ್ಣ ಹಿಡುವಳಿದಾರರಿಗೆ ಮುಟ್ಟಿಲ್ಲದೇ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ ;

(ಇ) ಈ ಯೋಜನೆಯನ್ನು ಇನ್ನೂ 5 ವರ್ಷಗಳವರೆಗೆ ವಿಸ್ತರಿಸಲು ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡಲಾಗಿದೆಯೇ ?

ಶ್ರೀ ಎನ್. ಚಿಕ್ಕೇಗೌಡ (ವ್ಯವಸಾಯ ಹಾಗೂ ಪಶುಸಂಗೋಪನ ಮಂತ್ರಿಗಳು).—

(ಅ) ನಾಲ್ಕನೇ ಯೋಜನೆಯ ಅವಧಿಯಲ್ಲಿ ಪ್ರಾರಂಭಿಸಲಾದ ಸಣ್ಣ ಹಿಡುವಳಿದಾರರ ಅಭಿವೃದ್ಧಿ ಏಜನ್ಸಿಯ ಯೋಜನೆಗಳು 1976ನೇ ಇಸವಿ ಮಾರ್ಚ್31 ರಂದು ಅಂತ್ಯಗೊಳ್ಳುವುವು. ಇವುಗಳನ್ನು ಐದನೇ ಯೋಜನೆಯ ಅಂತ್ಯದವರೆಗೆ (1978-79) ಇನ್ನೂ ಮುಂದುವರಿಸಲು ರಾಜ್ಯ ಸರ್ಕಾರದವರು ಭಾರತ ಸರ್ಕಾರದವರಿಗೆ ಶಿಫಾರಸು ಮಾಡಿದ್ದಾರೆ.

(ಆ) ಬಂದಿದೆ.

(ಇ) ಹಾಗಿದು.

ಶ್ರೀ ಬಿ. ಬೈರಪ್ಪಾಜಿ.—ಸಣ್ಣ ಹಿಡುವಳಿದಾರರ ಯೋಜನೆ 5 ಎಕರೆ ಒಳಪಟ್ಟಿರತಕ್ಕ ಈ ಸಣ್ಣ ಹಿಡುವಳಿದಾರರಿಗೆ ವರಪ್ರಧಾನವಾಗಿ ಬಂದಿರತಕ್ಕ ಈ ಯೋಜನೆ ಯಶಸ್ವಿಯಾಗಿ ಆಗಬೇಕಾದರೆ ಜಮೀನು ಅಭಿವೃದ್ಧಿ ಬ್ಯಾಂಕ್, ಸೇವಾ ಸಹಕಾರ ಸಂಘಗಳು ಇವೆಲ್ಲವೂ ಕೂಡ ಚೆನ್ನಾಗಿ ಕೆಲಸ ಮಾಡಿದರೆ ಸಾಧ್ಯ. ಕೆಲವು ಕಡೆ ಈ ಸಂಸ್ಥೆಗಳು ಸರಿಯಾಗಿ ಕೆಲಸ ಮಾಡದೇ ಇರುವುದರಿಂದ ಕೇವಲ 50 ಪರ್ಸೆಂಟ್ ಕೂಡ ಈ ಯೋಜನೆಯಿಂದ ಸಣ್ಣ ಹಿಡುವಳಿದಾರರಿಗೆ ಪ್ರಯೋಜನವಾಗಿಲ್ಲ ಎಂಬುದು ಸರ್ಕಾರಕ್ಕೆ ಮನವರಿಕೆಯಾಗಿದೆಯೇ ?

† ಶ್ರೀ ಎನ್ ಚಿಕ್ಕೇಗೌಡ.—ಈ ಸಣ್ಣ ಹಿಡುವಳಿದಾರರ ಯೋಜನೆ ಗೌರ್ನಮೆಂಟ್ ಆಫ್ ಇಂಡಿಯಾ ಮತ್ತು ಸ್ಟೇಟ್ ಗೌರ್ನಮೆಂಟಿನವರಿಂ ಸ್ಟಾರ್ಟ್ ಮಾಡಿದ್ದಾರೆ: ಇದರಿಂದ 6,12,540: ಜನರಲ್ಲಿ ಅನುಕೂಲ ಪಡೆಯತಕ್ಕವರು 1,92,709 ಜನ. ನಿಮ್ಮ ಜಿಲ್ಲೆಯಲ್ಲಿ 29,474 ಜನಕ್ಕೆ ಈ ಪ್ರಾಜೆಕ್ಟ್‌ನಿಂದ ಅನುಕೂಲವಾಗಿದೆ. ಆ ದೃಷ್ಟಿಯಿಂದ ಕೇಂದ್ರಸರ್ಕಾರದವರನ್ನು ಕೇಳಿದ್ದೇವೆ, ಮೈಸೂರ್ ಬಿದರ್, ನಾರ್ತ್‌ಕೆನರಾ ಜಿಲ್ಲೆಗಳಲ್ಲಿ ಇರತಕ್ಕ ಮಂತ್ತು ಬಿಜಾಪುರ, ತುಮಕೂರಿನಲ್ಲಿರತಕ್ಕವರಿಗೆ 5ನೇ ಪಂಚವಾರ್ಷಿಕಯೋಜನೆ ಕೊನೆಯವರೆಗೂ ಮುಂದುವರೆಸಿದ್ದೇವೆ, ಈಗತಾನೆ ಬಂದಿರತಕ್ಕ ಲೇಟೆಸ್ಟ್ ವರದಿ ಪ್ರಕಾರ 23-3-76ರಲ್ಲಿ ಗೌರ್ನಮೆಂಟ್ ಆಫ್ ಇಂಡಿಯಾ ಸ್ಯಾಂಕ್ಷನಿಂಗ್ ಕಮಿಟಿ ಸೇರಿತ್ತು, ಡೆವಲಪ್‌ಮೆಂಟ್ ಕಮಿಷನರ್ ಸಹ 23-3-76ರಂದು ಸಭೆಗೆ ಹೋಗಿದ್ದಾರೆ. ಅದರ ಪ್ರಕಾರ ನಾವು ಏನು ಮಾಡಬೇಕೆಂದು ಮಾಡಿದ್ದೇವೆ ಅದನ್ನು ಒಪ್ಪಿಕೊಂಡಿದ್ದಾರೆ. 5ನೇ ಪಂಚವಾರ್ಷಿಕ ಯೋಜನೆ ಕೊನೆಯವರೆಗೂ ಕೇಂದ್ರಸರ್ಕಾರದವರು ಕೊಟ್ಟಿರತಕ್ಕ ಎಸ್. ಎಫ್.ಡಿ.ಎ, ಪ್ರಾಜೆಕ್ಟನ್ನು ಮುಂದುವರೆಸುವುದಕ್ಕೆ ಒಪ್ಪಿಕೊಂಡಿದ್ದಾರೆ.

ಶ್ರೀ ಬಿ. ಬೈರಪ್ಪಾಜಿ.—ಕೇಂದ್ರ ಸರ್ಕಾರ ಈ ಯೋಜನೆಯನ್ನು ಇನ್ನೂ 5 ವರ್ಷಗಳವರೆಗೆ ವಿಸ್ತರಿಸಲು ಒಪ್ಪಿಕೊಂಡಿದೆ ಏಂದು ಮಾನ್ಯ ಮಂತ್ರಿಗಳು ಹೇಳಿರುವುದರಿಂದ ರಾಜ್ಯ ಸರ್ಕಾರಕ್ಕೂ ಹಾಗೂ ಕೇಂದ್ರ ಸರ್ಕಾರಕ್ಕೂ ವಂದನೆಗಳನ್ನರ್ಪಿಸಿ, ಈ ಯೋಜನೆ ಯಶಸ್ವಿಯಾಗುವುದಕ್ಕೆ ಸರ್ಕಾರ ಇನ್ನೂ ತ್ವರಿತವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಪ್ರಾರ್ಥನೆ ಮಾಡುತ್ತೇನೆ,

9-30 A.M.

ಅಧ್ಯಕ್ಷರು.—ಮಾನ್ಯ ಸದಸ್ಯರು ಈ ಸರ್ಟಿಫಿಕೇಟ್‌ಗಳನ್ನೆಲ್ಲ ಡಿಮ್ಯಾಂಡ್ ಬಗ್ಗೆ ಮಾತನಾಡುವಾಗ ಕೊಡಬಹುದು.

ಶ್ರೀ ಕೆ. ಹೆಚ್, ಹನುಮೇಗೌಡ.—ಅರ್ಧ ಎಕರೆ ಒಂದು ಎಕರೆ ಜಮೀನಿರತಕ್ಕಂತಹ ಎಷ್ಟೋ ಜನ ರೈತರಿಗೆ ನೀರಾವರಿ ಭಾಗಿಗಳನ್ನು ತೆಗೆಸಿಕೊಳ್ಳುವುದಕ್ಕೆ ಅವಕಾಶ ಇರುವುದಿಲ್ಲ. ಹಾಗಾದರೆ ತುಮಕೂರು ಜಿಲ್ಲೆಯಲ್ಲಿ ಎಷ್ಟು ಇರಿಗೇಶನ್ ವೆಲ್‌ಗಳನ್ನು ತೆಗೆಯುವುದಕ್ಕೆ ಪ್ರಾವಿಜನ್ ಇದೆ ಎಂಬುದನ್ನು ನಿರ್ದಿಷ್ಟವಾಗಿ ಹೇಳುತ್ತೀರಾ ?

SRI N CHIKKEGOWDA.—I want notice. I know the number, but I cannot difinitely say. But I myself had been to inagurate some of community irrigation wells which are very successful. I went to a village-I do non't remember the name where community irrigation wel's have been done and the benefit goes to the small farmers. As they come under Hassan District, the benefit goes to Hassan district where we have started SFDA project last year.

ಶ್ರೀ ಕಾಗೋಡು ತಿಮ್ಮಪ್ಪ.—ಸ್ವಾಮಿ, ತಮ್ಮ ಉತ್ತರದಲ್ಲಿ ಎಫ್.ಎಸ್.ಡಿ.ಎ, ಯೋಜನೆಯಿಂದ ಸಾಕಷ್ಟು ಮಂದಿ ರೈತರು ಪ್ರಯೋಜನ ಹೊಂದಿಲ್ಲವೆಂದು ಹೇಳಿದ್ದೀರಿ, ಈ ಯೋಜನೆಯನ್ನು ಪ್ರಾರಂಭಮಾಡಂವಾಗ ಎಷ್ಟು ವರ್ಷದ ಅವಧಿಯನ್ನು ಗೊತ್ತು ಮಾಡಿದ್ದೀರಿ, ಮತ್ತು ತುಮಕೂರು ಜಿಲ್ಲೆಯಲ್ಲಿ ಎಷ್ಟು ವರ್ಷದಿಂದ ಈ ಯೋಜನೆ ಇದೆ ?

ಶ್ರೀ ಎನ್: ಚಿಕ್ಕೇಗೌಡ:—ಐದು ವರ್ಷಗಳಿಂದ ಇದೆ. ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಪ್ರಾರಂಭ ಮಾಡಿದೆವು, ಪ್ರಾರಂಭ ಮಾಡಿದ ನಂತರ ಅಂಕಿಅಂಶಗಳನ್ನು ಸಂಗ್ರಹಿಸುವುದಕ್ಕೆ ಒಂದು ವರ್ಷ ತಡವಾಯಿತು. ಅದಕ್ಕೋಸ್ಕರ ಕೇಂದ್ರ ಸರ್ಕಾರದವರನ್ನು ಕೇಳಿ 5ನೇ ಪಂಚವಾರ್ಷಿಕ ಯೋಜನೆಯಲ್ಲಿ ಮುಂದುವರಿಸುತ್ತಿದ್ದೇವೆ ಈ ಯೋಜನೆ. ಅಂಕಿ ಅಂಶಗಳನ್ನು ಸಂಗ್ರಹಿಸುವುದು; ರಿಪೋರ್ಟ್ ತಯಾರು ಮಾಡುವುದು, ರೈತರಿಂದ ಅರ್ಜಿಗಳನ್ನು ಕರೆಯುವುದು, ಬ್ಯಾಂಕುಗಳಿಂದ ಸಾಲಕೊಡಿಸತಕ್ಕುದ್ದು ಸಬಸಿಡಿ ಕೊಡಿಸತಕ್ಕುದ್ದು ಇವುಗಳನ್ನೆಲ್ಲ ಮಾಡಬೇಕಾಗಿರುವುದರಿಂದ ತಡವಾಗುತ್ತದೆ: ಆದಕಾರಣ ಹೇಳಿದ ತಕ್ಷಣ ಮಾಡುವುದಕ್ಕಾಗುವುದಿಲ್ಲ ಇವುಗಳನ್ನೆಲ್ಲ ಮಾಡುವಾಗ ಬರತಕ್ಕ ಅಡ್ಡಿ ಆತಂಕಗಳನ್ನೆಲ್ಲಾ ನಿಭಾಯಿಸಿ ಕೊಂಡು ಮಾಡಬೇಕಾಗುತ್ತದೆ. ಮಾನ್ಯ ಸದಸ್ಯರಿಗೆ ಇದೆಲ್ಲ ಅರ್ಥವಾಗುವುದಿಲ್ಲ: ಅವರ ಜಿಲ್ಲೆಯಲ್ಲಿ ಇಂಥ ಒಂದುಯೋಜವೆ ಪ್ರಾರಂಭವಾದಾಗ ಅವರಿಗೆ ಅರ್ಥವಾಗುತ್ತದೆ,